**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪಿರಿಯಾಪಟ್ಟಣ.**

**ಸಿ.ಸಿ..613/2019**

| | | |
|---|---|---|
| ಸಾಕ್ಷಿಯ ಹೆಸರುಃ | ಚಿಕ್ಕಸ್ವಾಮಿ | ಫ್ರಾಸಾಃ 16 |
| ತಂದೆ ಹೆಸರುಃ | ಮರಿಚನ್ನೇಗೌಡ | ಚಾಸಾಃ 18 |
| ವಯಸ್ಸುಃ | 43 ವರ್ಷ | ಪ್ರಮಾಣೀಕರಿಸಿದ<br>ದಿಃ 22.12.2025 |
| ಉದ್ಯೋಗಃ | ಆರಕ್ಷಕ ನಿರೀಕ್ಷಕರು,<br>ಬಸವೇಶ್ವರ ನಗರ ಪೊಲೀಸ್ ಠಾಣೆ,<br>ಬೆಂಗಳೂರು. | |
| ವಾಸಸ್ಥಳಃ | ಬೆಂಗಳೂರು | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ ರವರಿಂದಃ

ನಾನು 27/06/2016 ರಿಂದ 09/10/2018 ರವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 18.06.2016 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊ. ಸಂ. 91/2016 ಕಲಂ 6(ಎ), 3, 7 ಅಗತ್ಯ ವಸ್ತುಗಳ ಕಾಯಿದೆ, ಕಲಂ 14, 18 ಕರ್ನಾಟಕ ಅಗತ್ಯ ವಸ್ತುಗಳ ನಿಯಂತ್ರಣ ಆದೇಶ, ಕಲಂ 4, 5, 8, 9 ಕರ್ನಾಟಕ ಅಗತ್ಯ ವಸ್ತುಗಳ ಲೆಕ್ಕ ಪತ್ರದ ನಿರ್ವಹಣಾ ಬೆಲೆ ಮತ್ತು ಆದೇಶ, ಕಲಂ 120(ಬಿ), 420 ಐ ಪಿ ಸಿ ಅಡಿಯಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-1 ರವರು ಹಾಜರುಪಡಿಸಿದ ಅರ್ದ ಕೆ ಜಿ ಯಷ್ಟು 2 ಅಕ್ಕಿ ತುಂಬಿದ ಮಾದರಿ ಮತ್ತು ಅರ್ಧ ಕೆ ಜಿ ಯಷ್ಟು 2 ಗೋಧಿ

ತುಂಬಿದ ಮಾದಡಿ ಚೀಲಗಳನ್ನು ಹಾಗೂ ಕೃತ್ಯಕ್ಕೆ ಬಳಸಲಾದ ವಾಹನ ನಂ. ಕೆಎ–45–5143 ಅನ್ನು ಹಾಜರುಪಡಿಸಿದ್ದು, ಚಾಸಾ–13 ಮತ್ತು 14 ರವರ ಸಮಕ್ಷಮದಲ್ಲಿ ಸಂಜೆ 7.00 ರಿಂದ 7.30 ರವರೆಗೆ ಠಾಣಾ ಆವರಣದಲ್ಲಿ ಮಹಜರು ಮುಖಾಂತರ ಅಮಾನತ್ತು ಮಾಡಿಕೊಳ್ಳಲಾಯಿತು. ಅದೇ ದಿನ ಚಾಸಾ–3 ರಿಂದ 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಆರೋಪಿತನನ್ನು ದಸ್ತಗಿರಿ ಕ್ರಮ ಜರುಗಿಸಿ, ವೈದ್ಯಕೀಯ ಪರೀಕ್ಷೆ ಮಾಡಿಸಿ ಸಿಬ್ಬಂದಿಗಳ ಸಹಾಯದಿಂದ ನ್ಯಾಯಾಲಯದ ಮುಂದೆ ಹಾಜರುಡಿಸಿರುತ್ತೇನೆ.

3. ದಿಃ 19.06.2016 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಂಚರಾದ ಚಾಸಾ–13 ಮತ್ತು 14 ರವರ ಸಮಕ್ಷಮದಲ್ಲಿ ಚಾಸಾ–2 ರವರು ತೋರಿಸಿ ಕೊಟ್ಟ ಮೇರೆಗೆ ಸ್ಥಳದಲ್ಲಿ ಬೆ 9.30 ರಿಂದ 10.30 ರವರೆಗೆ ಸ್ಥಳ ಮಹಜರು ಜರುಗಿಸಿರುತ್ತೇನೆ.

4. ದಿಃ 22.07.2016 ರಂದು ನ್ಯಾಯಾಲಯದ ಆದೇಶದಂತೆ ಕೃತ್ಯದಲ್ಲಿ ಭಾಗಿಯಾದ ವಾಹನವನ್ನು ಪಂಚರಾದ ಚಾಸಾ–15 ಮತ್ತು 16 ರವರ ಸಮಕ್ಷಮ ಮಹಜರು ಜರುಗಿಸಿ, ಫೋಟೋ ತೆಗೆದು ವಾಹನದ ಮಾಲೀಕರಿಗೆ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ.

5. ದಿಃ 05.08.2016 ರಂದು ಚಾಸಾ–7 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

6. ದಿಃ 13.02.2017 ರಂದು ಅಮಾನತ್ತು ಪಡಿಸಿಕೊಂಡ ಮಾದರಿ ಅಕ್ಕಿ ಮತ್ತು ಗೋಧಿಯನ್ನು ಪರಿಶೀಲಿಸಿ ವರದಿ ನೀಡುವಂತೆ ಆಹಾರ ನಿರೀಕ್ಷಕರು, ಪಿರಿಯಾಪಟ್ಟಣ ತಾಲ್ಲೂಕು ರವರಿಗೆ ಮನವಿ ಸಲ್ಲಿಸಿರುತ್ತೇನೆ.

7. ದಿಃ 07.03.2017 ರಂದು ಸದರಿಯವರಿಂದ ವರದಿಯನ್ನು ಸ್ವೀಕರಿಸಿರುತ್ತೇನೆ. ಅಮಾನತ್ತು ಪಡಿಸಿಕೂಂಡ ಮಾಲುಗಳನ್ನು ಠಾಣಾ ಮಾಲು ಪಟ್ಟಿ ನಂ. 104/2016 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

8. ದಿಃ 07.03.2017 ರಂದು ಕೃತ್ಯ ನಡೆದ ಸ್ಥಳದ ಡಿಮ್ಯಾಂಡ್ ರಿಜಿಸ್ಟರ್ ಅನ್ನು ಪಡೆದು ಅದನ್ನು ಪರಿಶೀಲಿಸಿದಾಗ ಸದರಿ ಸ್ಥಳವು ಪ್ರಕಾಶ ಶೆಟ್ಟಿ ಬಿನ ಸಿದ್ದಲಿಂಗಶೆಟ್ಟಿ ರವರ

ಹೆಸರಿನಲ್ಲಿರುತ್ತದೆ ಎಂದು ಕಂಡು ಬಂದಿರುತ್ತದೆ. ಅದೇ ದಿನ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

9. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಜಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.17** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.17(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.4(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.5(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.6(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-15 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.15(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-16 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.16(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ನಕಲಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.18** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.18(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪರಿಶೀಲನಾ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.19** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.19(ಎ)** ಎಂದು ಗುರುತಿಸಲಾಯಿತು.

ಸಾಕ್ಷಿಯು ಮಾಲುಪಟ್ಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.20** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.20(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮಾಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 4 ಎಂದು ಗುರುತಿಸಲಾಗಿದೆ. ಆ ದಿನ ನನ್ನ ಮುಂದೆ ಹಾಜರುಪಡಿಸಿದ ಆರೋಪಿತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ** ಸಿ ಎಸ್ ಎಂ **ವಕೀಲರಿಂದಃ**

10. ಚಾಸಾ-1 ರವರು ಸಂಜೆ 6.00 ಗಂಟೆಗೆ ಠಾಣೆಗೆ ಹಾಜರಾಗಿ ತಮ್ಮ ದೂರನ್ನು ಸಲ್ಲಿಸಿರುತ್ತಾರೆ. ಅವರೊಂದಿಗೆ ಅವರ ಸಿಬ್ಬಂದಿಗಳು ಬಂದಿದ್ದರು. ಅವರು ನೀಡಿದ ದೂರನ್ನು ಪರಿಶೀಲಿಸಿರುತ್ತೇನೆ. ಚಾಸಾ-1 ರವರು ತಮ್ಮ ದೂರಿನಲ್ಲಿ ಆರೋಪಿತ ಪಡಿತರಿಗೆ ನೀಡಿದಂತಹ ಅಕ್ಕಿ ಮತ್ತು ಗೋಧಿಯನ್ನು ಪಡೆದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ತಿಳಿಸಿರುತ್ತಾರೆ. ತಮ್ಮ ದೂರಿನಲ್ಲಿ 13.47 ಕ್ವಿಂಟಾಲ್ ಅಕ್ಕಿ, 12.16 ಕ್ವಿಂಟಾಲ್ ಗೋಧಿ ಅಮಾನತ್ತು ಪಡಿಸಿಕೊಂಡ ಬಗ್ಗೆ ತಿಳಿಸಿದರು. ಸದರಿ ಅಕ್ಕಿ ಮತ್ತು ಗೋಧಿಯು ಪಡಿತರಿಗೆ ಸೇರಿದ್ದು ಎಂದು ನಾನು ಪರಿಶೀಲಿಸಿಲ್ಲ, ಕಾರಣ ಆಹಾರ ನಿರೀಕ್ಷಕರೇ ಖಚಿತ ಮಾಹಿತಿ ನೀಡಿದ್ದರು. ದೂರನ್ನು ನೀಡಿದಾಗ ಪರಿಶೀಲಿಸಿ ಸ್ವೀಕರಿಸಬೇಕು ಎಂದರೆ ಸಾಕ್ಷಿಯು ನಾವು ತಜ್ಞರಲ್ಲದ ಕಾರಣ ದೂರನ್ನು ಸ್ವೀಕರಿಸಿ ಆಹಾರ ನಿರೀಕ್ಷಕರಿಗೆ ಪರಿಶೀಲಿಸಿ ವರದಿ ನೀಡಲು ಕೋರಿದ್ದೇವೆ ಎಂದು ನುಡಿಯುತ್ತಾರೆ. ದೂರುದಾರರು ಆಹಾರ ನಿರ್ದೇಶಕರಾಗಿದ್ದು, ನಾನು ಮಾಲನ್ನು ಆಹಾರ ನಿರೀಕ್ಷಕರಿಂದ ಪರಿಶೀಲಿಸಿ ವರದಿಯನ್ನು ಸ್ವೀಕರಿಸಿರುತ್ತೇನೆ. ಚಾಸಾ-1 ರವರು ದೂರನ್ನು ನೀಡಿದ್ದರು. ಚಾಸಾ-2 ರವರು ಮಾಲನ್ನು ಪರೀಕ್ಷಿಸಿ ವರದಿ ನೀಡಿದ್ದರು. ಚಾಸಾ-2 ರವರು ದಾಳಿ ಮಾಡಿದ್ದರು ಎಂದರೆ ಸರಿ. ಮು.ಮಾ-1 ರಿಂದ 4 ಅನ್ನು ನಾನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ತೊಂದರೆ ನೀಡು ಚಾಸಾ-1 ಮತ್ತು 2 ರವರೊಂದಿಗೆ ಶಾಮೀಲಾಗಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಡಿಮ್ಯಾಂಡ್ ರಿಜಿಸ್ಟರ್ ಪಡೆಯಲು ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಠಾಣೆಯಲ್ಲಿ ಸ್ಥಳ ಮಹಜರನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿದ್ದೇನೆ ಎಂದರೆ ಸರಿ. ನಾನು ಅಮಾನತ್ತು ಪಡಿಸಿಕೊಂಡ ಮಾಲುಗಳ ವರದಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಸಲ್ಲಿಸಿದ ಮನವಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಕ್ಕಿ, ಗೋಧಿ ಸಾಮಾನ್ಯವಾಗಿ ಎಲ್ಲಾ ಕಡೆ ದೂರೆಯುತ್ತದೆ ಎಂದರೆ ಸರಿ. ಅಕ್ಕಿ ಮತ್ತು ಗೊಧಿಯನ್ನು ಬೇರೆ ಕಡೆಯಿಂದ ಪಡೆದು ಆರೋಪಿತರಿಗೆ ತೊಂದರೆ ನೀಡಲು ಅದು ಪಡಿತರ ಅಕ್ಕಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನವನ್ನು ದುರುದ್ದೇಶದಿಂದ ಅಮಾನತ್ತು ಪಡಿಸಿಕೊಂಡಿದ್ದು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.